ವಿಷಯ: ತುಮಕೂರು ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳ ಸ್ಥಾಪನೆ.

1194 (1682)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರ ಯೋಚಿಸಿದೆ? (ಪೂರ್ಣ ವಿವರ ನೀಡುವುದು).

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಪ್ರಸ್ತಾವನೆ ಸಲ್ಲಿಸುವಂತೆ ತುಮಕೂರು ಜಿಲ್ಲಾ ಪಂಚಾಯತ್ ಅನ್ನು ಕೋರಲಾಗಿದೆ. ಮಾಹಿತಿ ಬಂದ ನಂತರ ಪರಿಶೀಲಿಸಲಾಗುವುದು.

ವಿಷಯ: ತುಮಕೂರು ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿ.

1195 (1681)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ಸ್ಕೀಂನಿಂದ ಯಾವ ಯಾವ ತಾಲ್ಲೂಕುಗಳ ರಸ್ತೆ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ನೀಡಲಾಗಿದೆ? (ಪೂರ್ಣ ವಿವರ ನೀಡುವುದು)